ಸುದ್ದಿ ಸಿಂಚನ

ಕ್ಷುಲ್ಲಕ ಕಾರಣಕ್ಕೆ ಅಂಗಡಿ ಮಾಲೀಕ, ಲಾರಿ ಲೋಡರ್ ನಡುವೆ ಜಗಳ

ಮೈಸೂರು: ಅಂಗಡಿ ಮಾಲೀಕ ಮತ್ತು ಲಾರಿ ಲೋಡರ್ ನಡುವೆ ಕ್ಷುಲ್ಲಕ ಕಾರಣಕ್ಕೆ ಜಗಳವಾಗಿದ್ದು, ಅಂಗಡಿ ಮಾಲೀಕ ಗಾಯಗೊಂಡಿರುವ ಘಟನೆ ಮೈಸೂರಿನ ಬಂಡಿಪಾಳ್ಯ ಎಪಿಎಂಸಿಯವಲ್ಲಿ ಬುಧವಾರ ಸಂಜೆ ನಡೆದಿದೆ. ನಂಜನಗೂಡು ಪಟ್ಟಣದ ಉಮಾ ಭಂಡಾರ್ ಮಾಲೀಕ ನಾಗೇಂದ್ರ ಎಂಬವರೇ ಗಾಯಗೊಂಡಿದ್ದು, ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇವರ ಮೇಲೆ ಲಾರಿ ಲೋಡರ್ ಮುಬಾರಕ್ ಎಂಬಾತ ಹಲ್ಲೆ ಮಾಡಿದ್ದಾರೆ. ನಾಗೇಂದ್ರ ಅವರು ನಂಜನಗೂಡಿನಲ್ಲಿ ಅಂಗಡಿ ಇಟ್ಟಿದ್ದು, ಬಂಡಿಪಾಳ್ಯದ ಎಪಿಎಂಸಿಯಿಂದ ಸಾಮಾನುಗಳನ್ನು ತೆಗೆದುಕೊಂಡು ಹೋಗುತ್ತಾರೆ. ರಫೀಕ್ ಎಂಬವರ ಮಾಲೀಕತ್ವದ ಲಾರಿಯಲ್ಲಿ ತೆಗೆದುಕೊಂಡು ಹೋಗಲು ಲೋಡ್ ಮಾಡುವ ವೇಳೆ ಲೋಡರ್ ಮುಬಾರಕ್ ಮತ್ತು ನಾಗೇಂದ್ರ ಅವರ ನಡುವೆ ಕೆಲಸದ ವಿಷಯಕ್ಕೆ ಜಗಳವಾಗಿ ಹೊಡೆದಾಟವಾಗಿದೆ. ಈ ವೇಳೆ ನಾಗೇಂದ್ರ ಅವರ ಮಂಡಿ ಮತ್ತು ಭುಜಕ್ಕೆ ಏಟಾಗಿದ್ದು, ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಸಂಬಂಧ ಮೈಸೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚಪ್ಪರಕ್ಕೆ ಬೆಂಕಿ

ಮೈಸೂರು: ನಗರದ ದೇವಸ್ಥಾನವೊಂದರ ಮುಂದೆ ಹಾಕಲಾಗಿದ್ದ ಚಪ್ಪರಕ್ಕೆ ಕಿಡಿಗೇಡಿಗಳು ಬೆಂಕಿ ಹಾಕಿರುವ ಘಟನೆ ಮೈಸೂರಿನ 2ನೇ ಈದ್ಗಾ ಬಡಾವಣೆಯಲ್ಲಿ ನಡೆದಿದೆ. ಬಸವೇಶ್ವರ ದೇವಸ್ಥಾನದ ಮುಂಭಾಗ ಹಾಕಿದ್ದ ತೆಂಗಿನ ಗರಿಯ ಚಪ್ಪರಕ್ಕೆ ಬೆಂಕಿ ಹಚ್ಚಲಾಗಿದೆ. ಗುರುವಾರ ಮುಂಜಾನೆ 4 ರಿಂದ 5 ಗಂಟೆಯ ಸಮಯದಲ್ಲಿ ಬೆಂಕಿ ಹಾಕಿದ್ದು, ದೇವಸ್ಥಾನದ ಮುಂದೆ ಹಾಕಲಾಗಿರುವ ಚಪ್ಪರಕ್ಕೆ ಬೆಂಕಿ ಹಾಕಿರುವುದು ಸಾಕಷ್ಟು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ. ಸ್ಥಳಕ್ಕೆ ಎನ್. ಆರ್. ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದ್ದಾರೆ.

ಹೈನುಗಾರಿಕೆ, ಉಪ ಉತ್ಪನ್ನಗಳಿಂದ ಮಾಸಿಕ ₹ 1 ಲಕ್ಷ

ಗೋಪಾಲಪುರದ ದಿಲೀಪ್ ಸಾಧನೆ | ಹಾಲು, ಬೆಣ್ಣೆ, ತುಪ್ಪ, ಪನ್ನೀರ್ ಹೋಂ ಡೆಲಿವರಿ | ಮುಂಬೈ, ದುಬೈ, ಲಂಡನ್‌ನಲ್ಲಿ ಇದ್ದಾರೆ ಗ್ರಾಹಕರು

• **ಅಂತಿ ಪ್ರಸನ್ನಕುಮಾರ್**
ಕನ್ನಡಪ್ರಭ ವಾರ್ತೆ ಮೈಸೂರು

ಮೈಸೂರುತಾಲೂಕುಗೋಪಾಲಪುರದಸಿ.ದಿಲೀಪ್ (41) ಹೈನುಗಾರಿಕೆಯಲ್ಲಿ ಹೆಸರು ಮಾಡಿದ್ದು, ಉಪ ಉತ್ಪನ್ನಗಳ ತಯಾರಿಸಿ ಮಾರಾಟ ಮಾಡುವುದರ ಮೂಲಕ ಖರ್ಚೆಲ್ಲಾ ಕಳೆದು ಮಾಸಿಕ 90 ಸಾವಿರ ರೂ.ಗಳಿಂದ 1 ಲಕ್ಷ ರೂ.ಗಳವರೆಗೆ ಆದಾಯ ಮಾಡುತ್ತಿದ್ದಾರೆ.

ಡಿಪ್ಲೋಮಾ ಇನ್ ಫೈನ್ ಆರ್ಟ್ಸ್ ಓದಿರುವ ದಿಲೀಪ್ ಅವರಿಗೆ 2.18 ಎಕರೆ ಜಮೀನು ಇದೆ. 13 ವರ್ಷಗಳ ಹಿಂದೆ ವ್ಯವಸಾಯ ಆರಂಭಿಸಿದರು. 9 ವರ್ಷಗಳಿಂದ ಹೈನುಗಾರಿಕೆಯ ಜೊತೆಗೆ ಉಪ ಉತ್ಪನ್ನಗಳ ತಯಾರಿಕೆ ಮತ್ತು ಮಾರಾಟ ಆರಂಭಿಸಿದರು. ಆರಂಭದಲ್ಲಿ 3 ಹಸುಗಳಿದ್ದವು. ನಂತರ 34 ಹಸುಗಳವರೆಗೆ ಏರಿಕೆಯಾಯಿತು. ಕಡಿಮೆ ಹಸುಗಳ ಮೂಲಕ ಹೆಚ್ಚು ಆದಾಯ ಗಳಿಸಬೇಕು ಎಂಬ ಉದ್ದೇಶದಿಂದ ಈಗ 10 ಹಸುಗಳನ್ನು (ಎಚ್ ಎಫ್ ಬ್ರೀಡ್) ಮಾತ್ರ ಸಾಕುತ್ತಿದ್ದಾರೆ. ಪ್ರತಿನಿತ್ಯ ಬೆಳಗ್ಗೆ ಹಾಗೂ ಸಂಜೆ ತಲಾ 20 ಲೀಟರ್ ಹಾಲನ್ನು ಮೈಸೂರಿಗೆ ಹೋಂ ಡೆಲಿವರಿ ಕೊಡುತ್ತಿದ್ದಾರೆ.

ಕೋವಾ, ಐಸ್‌ಕ್ರೀಂ, ತುಪ್ಪ, ಕುಲ್ಫಿ, ಪನ್ನೀರ್ ತಯಾರಿಸಿ ಮಾರಾಟ ಮಾಡುತ್ತಿದ್ದಾರೆ. ಪ್ರಸ್ತುತ ಬ್ರ್ಯಾಂಡ್ ಹೆಸರನ್ನು ಕಲ್ಪತರು ಎಂದು ಬದಲಿಸಿದ್ದಾರೆ. ಬಾಂಬೈ, ದುಬೈ, ಲಂಡನ್‌ನಲ್ಲಿರುವ ವರು ಮೈಸೂರಿಗೆ ಬಂದಾಗ ಇವರ ಉತ್ಪನ್ನಗಳನ್ನು ಖರೀದಿಸುತ್ತಾರೆ. ಅದರಲ್ಲೂ ತುಪ್ಪಗೆ ಭಾರಿ ಡಿಮ್ಯಾಂಡ್!

ದಿಲೀಪ್ ಅವರು ಜಮೀನಿನಲ್ಲಿ 5 ಸೈಲೇಜ್ ತೊಟ್ಟಿಗಳನ್ನು ನಿರ್ಮಿಸಿಕೊಂಡಿದ್ದು, ಇವು 60 ಟನ್ ಸಾಮರ್ಥ್ಯವುಳ್ಳ ತೊಟ್ಟಿಗಳಾಗಿವೆ. ಇಲ್ಲಿ ಉತ್ಕೃಷ್ಟ ಗೊಳಿಸಿದ ಮೇವನ್ನು ಹಸುಗಳಿಗೆ ನೀಡುತ್ತಾರೆ., ಹಸುಗಳಿಂದ ಉತ್ಪತ್ತಿಯಾದ ಸಗಣಿ, ಗಂಜಲಗಳ ಸಮರ್ಥ ಬಳಕೆಗಾಗಿ ಜರ್ಮನ್ ಮಾದರಿಯ

ಗ್ರಾಮಾಂತರ ಪ್ರದೇಶದಲ್ಲಿ ವಿದ್ಯುತ್ ಸಮಸ್ಯೆ. ಹೀಗಾಗಿ ನಾನು ಗೋಬರ್ ಗ್ಯಾಸ್ ಘಟಕ ಹಾಕಿಕೊಂಡಿದ್ದೇನೆ.

ಇದರಿಂದ ಅಡುಗೆ, ಸನಾ ಹಾಗೂ ಜನರೇಟರ್‌ಗೆ ತೊಂದರೆ ಇಲ್ಲ. ಎಲ್ಲಾ ರೀತಿಯ ತ್ಯಾಜ್ಯವನ್ನು ಗುಂಡಿಯಲ್ಲಿ ಶೇಖರಿಸಿ, ದ್ರವರೂಪದಲ್ಲಿ ಜಮೀನಿಗೆ ನೇರವಾಗಿ ಹಾಯಿಸುತ್ತೇನೆ. ರೈತರು ಉಪ ಉತ್ಪನ್ನಗಳನ್ನು ತಯಾರಿಸುವುದು ಹಾಗೂ ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡುವುದರಿಂದ ಹೆಚ್ಚಿನ ಆದಾಯ ಮಾಡಬಹುದು.

• **ಸಿ. ದಿಲೀಪ್** ಗೋಪಾಲಪುರ

ಭಾಗ-18

ಗೋಬರ್ ಗ್ಯಾಸ್ ಘಟಕವನ್ನು ನಿರ್ಮಿಸಿಕೊಂಡಿದ್ದಾರೆ. ಇದರಿಂದ ಮನೆ ಅಡುಗೆ, ಸ್ನಾನಕ್ಕೆ ನೀರು ಕಾಯಿಸಲುಈಅನಿಲವನ್ನುಉಪಯೋಗಿಸಿಕೊಳ್ಳುವುದರಿಂದ ಹಣ ಉಳಿತಾಯವಾಗುತ್ತಿದೆ.

ಗೋಬರ್ ಗ್ಯಾಸ್ ಘಟಕದಿಂದ ಉತ್ಪತ್ತಿಯಾದ ಸ್ಲರಿಯನ್ನು (ಸಗಣಿ ಬಗ್ಗಡ) ಅವರೆ, ಅಲಸಂದೆ, ಶುಂಠಿ, ತೆಂಗು, ಸಾಗುವಾನಿ, ಸಿಲ್ವರ್ ಓಕ್‌ಗಳಿಗೆ ನಿರಂತರವಾಗಿ ನೀಡುತ್ತಿದ್ದಾರೆ. ಇದರಿಂದ ಭೂಮಿಯಲ್ಲಿ ಸೂಕ್ಷ್ಮಜೀವಿ ಚಟುವಟಿಕೆ ಹೆಚ್ಚಾಗಿ ಎರೆಹುಳುಗಳ ಸಂಖ್ಯೆಯೂ ಭೂಮಿಯಲ್ಲಿ ಹೆಚ್ಚಾಗಿದೆ.

ಬೆಳೆಯುವ ಬೆಳೆಗಳಿಗೆ ರೋಗನಾಶಕ, ಕೀಟ ನಾಶಕ, ಕಳೆನಾಶಕಇನ್ನಿತರಯಾವುದೇರಾಸಾಯನಿಕಗಳನ್ನು ಬಳಸದೇ ಸಾವಯವ ಪದ್ಧತಿಯಲ್ಲಿ ವ್ಯವಸಾಯ ಮಾಡುತ್ತಿದ್ದಾರೆ. ಇವರು ನಿರಂತರ ವಾಗಿ ತಮ್ಮ ಜಮೀನಿಗೆ ಸ್ಲರಿಯನ್ನು ಹಾಯಿಸುವುದ ರಿಂದ ತೆಂಗಿನ ಗರಿಗಳು, ಹಸಿ ತ್ಯಾಜ್ಯಗಳು ಇನ್ನಿತರ ತರಗೆಲೆಗಳನ್ನು ಭೂಮಿಗೆ ಸೇರಿಸಿದಾಗ ಅವು ಬೇಗ ಕೊಳೆತು ಭೂಮಿಗೆ ಉತ್ಕೃಷ್ಟ ಗೊಬ್ಬರವಾಗುತ್ತದೆ.

1.18 ಎಕರೆ ಜಮೀನಿನಲ್ಲಿ 120 ತೆಂಗು, 100 ತೇಗ, 700 ಅಡಿಕೆ, 500 ಶ್ರೀಗಂಧದ ಮರಗಳಿವೆ. ರೊಬೆಸ್ಟಾ, ಅರೇಬಿಕಾ, ಚಂದ್ರಗಿರಿ ತಳಿಯ 1500 ಕಾಫಿ ಗಿಡಗಳು ಕೂಡ ಇವೆ. ಮೆಣಸು, ಏಲಕ್ಕಿ ಕೂಡ ಬೆಳೆದಿದ್ದಾರೆ. 55 ಬಗೆಯ ವೈವಿಧ್ಯಮಯ ಹಣ್ಣುಗಳನು ಬೆಳೆಯುತ್ತಾರೆ. ಕದಳಿಫಲ, ಕಮಲಫಲ, ಚಂದ್ರ ಬಾಳೆ, ನೇಂದ್ರ ಕೆಂಪು ಬಾಳೆ ಗಿಡಗಳೂ ಇವೆ.

ಹಿಂದೆ ಜಮೀನಿನಲ್ಲಿ 60 ಕುರಿ, 20 ಮೇಕೆ, 150ಕ್ಕೂ ಹೆಚ್ಚು ಕೋಳಿಗಳನ್ನು ಸಾಕಿದ್ದರು. ಈಗ ಎಲ್ಲ ಮಾರಾಟ ಮಾಡಿ, ರಾಜಸ್ಥಾನದಿಂದ ಹೊಸ ಕುರಿ ತಳಿ ತರಿಸುತ್ತಿದ್ದಾರೆ. ಈ ರೀತಿಯ ತಳಿಯನ್ನು ಸಾಕುವ ರಾಜ್ಯದ ಎರಡನೇ ವ್ಯಕ್ತಿ ಎನಿಸಿಕೊಳ್ಳಲಿದ್ದಾರೆ. ಧಾರವಾಡದ ರೈತರೊಬ್ಬರ ಬಳಿ ಈ ತಳಿಯ ನಾಲ್ಕು ಕುರಿಗಳಿವೆ. ಇವರು 2020-21ನೇ ಸಾಲಿನಲ್ಲಿ ರಾಜ್ಯ ಮಟ್ಟದ ಕೃಷಿ ಪಂಡಿತ 3ನೇ ಬಹುಮಾನ ಗಳಿಸಿದ್ದಾರೆ. ಎಲ್ಲಾ ರಾಜ್ಯದ ಅಧಿಕಾರಿಗಳು, ತಮಿಳುನಾಡು ಮತ್ತಿತರ ರಾಜ್ಯಗಳ ರೈತರು ಇವರ ಜಮೀನಿಗೆ ಭೇಟಿ ನೀಡಿ, ಮಾಹಿತಿ ಪಡೆದಿರುವುದು ವಿಶೇಷ.

ಸಂಪರ್ಕ ವಿಳಾಸ: ದಿಲೀಪ್ ಬಿನ್ ಸಿ. ಚಿಕ್ಕಣ್ಣೇಗೌಡ, ಗೋಪಾಲಪುರ, ಜಯಪುರ ಹೋಬಳಿ, ಮೈಸೂರು ತಾಲೂಕು

ಸಿದ್ದರಾಮಯ್ಯಗೆ ಅದ್ಧೂರಿಯಾಗಿ ಸ್ವಾಗತ ಕೋರಲು ತೀರ್ಮಾನ

• **ಕನ್ನಡಪ್ರಭ ವಾರ್ತೆ** ಮೈಸೂರು

ಸಿದ್ದರಾಮಯ್ಯ ಅವರು ಎರಡನೇ ಬಾರಿ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಮೊದಲ ಬಾರಿಗೆ ಮೈಸೂರು ಜಿಲ್ಲೆಗೆ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಅದ್ಧೂರಿಯಾಗಿ ಸ್ವಾಗತಿಸಲು ನಿರ್ಧರಿಸಲಾಯಿತು.

ನಗರದ ಕಾಂಗ್ರೆಸ್ ಭವನದಲ್ಲಿ ಗುರುವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಹಲವು ಮುಖಂಡರು ತಮ್ಮ ಅನಿಸಿಕೆ ಹಂಚಿಕೊಂಡರು.

ಸಿದ್ದರಾಮಯ್ಯ ಅವರನ್ನು ಸಾಂಪ್ರದಾಯಿಕವಾಗಿ ಸ್ವಾಗತಿಸಲು ತೀರ್ಮಾನಿಸಲಾಗಿದೆ. ಸುತ್ತೂರು ಗ್ರಾಮದ ಹೊರ ವಲಯದಲ್ಲಿ ಹೆಲಿಪ್ಯಾಡ್ ನಿರ್ಮಿಸಿದ್ದು, ಕಾರ್ಯಕ್ರಮದಲ್ಲಿ 40 ರಿಂದ 50 ಸಾವಿರ ಮಂದಿ ಸೇರಬಹುದು ಎಂದು ಜಿಲ್ಲಾಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್ ಹೇಳಿದರು.

ಸಿದ್ದರಾಮಯ್ಯ ಅವರನ್ನು ಅರ್ಧ ಕಿ.ಮೀ. ದೂರ ತೆರೆದ ಜೀಪಿನಲ್ಲಿ ಕರೆತರಲು ಚಿಂತಿಸಲಾಗಿದೆ. ಬ್ಲಾಕ್ ಅಧ್ಯಕ್ಷರು, ಪಕ್ಷದ ಹಿರಿಯ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಜನರನ್ನು ಕರೆದುಕೊಂಡು ಬರಬೇಕು. ಕಲಾತಂಡಗಳ ವ್ಯವಸ್ಥೆ ಮಾಡಬೇಕು ಎಂದರು.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಗುರುವಾರ ನಡೆದ ಸಭೆಯಲ್ಲಿ ಮಾಜಿ ಶಾಸಕ ಬನ್ನೂರು ಕೃಷ್ಣಪ್ಪ ಮಾತನಾಡಿದರು. ಈ ಸಂದರ್ಭದಲ್ಲಿ ಹಲವರು ಇದ್ದರು.

ಕೆಪಿಸಿಸಿ ಸದಸ್ಯ ಕೆ. ಮರೀಗೌಡ ಮಾತನಾಡಿ, ಸಿದ್ದರಾಮಯ್ಯ ಅವರು ಮತ್ತೆ ಮುಖ್ಯಮಂತ್ರಿಯಾಗುವ ಮೂಲಕ ಹೊಸಯುಗ ಪ್ರಾರಂಭವಾಗಿದೆ. ನಾವೆಲ್ಲರೂ ಸಹಕಾರ ಕೊಟ್ಟರೆ ಉತ್ತಮವಾಗಿ ಆಡಳಿತ ನೀಡಲು ಸಾಧ್ಯ. 2024ರ ಲೋಕಸಭಾ ಚುನಾವಣೆದೃಷ್ಟಿಯಲ್ಲಿಟ್ಟುಕೊಂಡು ಕಾರ್ಯೋನ್ಮುಖರಾಗಬೇಕು ಎಂದು ಅವರು ತಿಳಿಸಿದರು.

ಮಾಜಿ ಶಾಸಕ ಬನ್ನೂರು ಕೃಷ್ಣಪ್ಪ ಮಾತನಾಡಿ, ಸಿದ್ದರಾಮಯ್ಯ 2ನೇ ಬಾರಿಗೆ ಮುಖ್ಯಮಂತ್ರಿ ಆಗಿರುವುದು ಹೆಮ್ಮೆಯ ಸಂಗತಿ. ಅವರನ್ನು ಆತ್ಮೀಯವಾಗಿ ಸ್ವಾಗತಿಸುವುದು ನಮ್ಮ ಆದ್ಯ ಕರ್ತವ್ಯ. ಪಕ್ಷವನ್ನು ಅಧಿಕಾರಕ್ಕೆ ತರಲು ಕಷ್ಟಪಟ್ಟವರಿಗೆ ಅವಕಾಶ ಸಿಗಬೇಕು ಎಂದು ಅವರು ಆಶಿಸಿಸಿದರು.

ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಲತಾ ಸಿದ್ದಶೆಟ್ಟಿ, ನಗರ ಘಟಕದ ಅಧ್ಯಕ್ಷೆ ಪುಷ್ಪಲತಾ ಚಿಕ್ಕಣ್ಣ, ಕೆಪಿಸಿಸಿ ಕಾರ್ಯದರ್ಶಿ ರಾಮಪ್ಪ, ನಗರಾಧ್ಯಕ್ಷ ಆರ್. ಮೂರ್ತಿ, ಕೆಪಿಸಿಸಿ ಕಾರ್ಯದರ್ಶಿ ಚಂದ್ರಮೌಳಿ, ಮುಖಂಡರಾದ ಶಿವನಾಗಪ್ಪ, ಮಂಜುಳಾ ಮಾನಸ, ಕೂರ್ಗಳ್ಳಿ ಮಹದೇವ್, ಮಾಜಿ ಮೇಯರ್ ಚಿಕ್ಕಣ್ಣ, ಪ್ರೊ. ಶಿವಪ್ರಸಾದ್, ಸೇವಾದಳ ಮುಖಂಡ ಗಿರೀಶ್, ಕಾಂಗ್ರೆಸ್ ಮುಖಂಡ ಸುಂದರ, ಹರ್ಷ, ಈಶ್ವರ ಚಕ್ಕಡಿ, ಡಿ. ನಾಗಭೂಷಣ್, ಜವರೇಗೌಡ, ಎನ್. ಆರ್. ಕ್ಷೇತ್ರದ ಬ್ಲಾಕ್ ಅಧ್ಯಕ್ಷ ಮಂಜುನಾಥ್ ಇದ್ದರು.

ನೂತನ ಸಚಿವರಿಗೆ ಜಿಟಿಡಿ ಅಭಿನಂದನೆ

ಮೈಸೂರು: ಸಹಕಾರ ಸಚಿವ ಕೆ.ಎನ್. ರಾಜಣ್ಣ, ಕಾನೂನು ಸಚಿವ ಎಚ್.ಕೆ. ಪಾಟೀಲ್, ಸಕ್ಕರೆ ಸಚಿವ ಶಿವಾನಂದ ಪಾಟೀಲ್ ಅವರಿಗೆ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷ ಹಾಗೂ ಶಾಸಕ ಜಿ.ಟಿ. ದೇವೇಗೌಡ ಗೌರವ ಸಮರ್ಪಿಸಿದರು.

ಈ ವೇಳೆ ಹುಣಸೂರು ಶಾಸಕ ಜಿ.ಡಿ. ಹರೀಶ್‌ಗೌಡ, ಸಹಕಾರ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಉಮಾ ಶಂಕರ್, ಸಹಕಾರ ಸಂಘಗಳ ನಿಬಂಧಕ ಕ್ಯಾಪ್ಟನ್ ರಾಜೇಂದ್ರ ಅವರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಹಲವರು ಇದ್ದರು.

ಮೈಸೂರಿನ ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಆಯೋಜಿಸಿದ್ದ ಉನ್ನತಿ-2023 ಅಂತರ ಶಿಸ್ತೀಯ ಸಂಶೋಧನೆ ಕುರಿತ ಕಾರ್ಯಕ್ರಮವನ್ನು ಮೊರಾರ್ಜಿ ದೇಸಾಯಿ ಯೋಗ ಸಂಸ್ಥೆ ನಿರ್ದೇಶಕ ಡಾ. ಈಶ್ವರ್ ವಿ. ಬಸವರಡ್ಡಿ ಉದ್ಘಾಟಿಸಿದರು. ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಡಾ.ಸಿ.ಜಿ. ಬೆಟಸೂರಮಠ್, ಡಾ.ಬಿ. ಸುರೇಶ್, ಮಹೇಶ್ ಮೊದಲಾದವರು ಇದ್ದಾರೆ.

ಶ್ರದ್ಧಾಂಜಲಿ

ಶಾರದ ಶಾಮಣ್ಣ
ದಿವಂಗತ ಕಳಸ ಶಾಮಣ್ಣಸವರ ಧರ್ಮಪತ್ನಿ ಅವರು ಗುರುವಾರ ಜೂನ್ 8, 2023 ಬೆಳಗ್ಗೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ
Ph: 94492 13917
ದುಃಖತಪ್ತ ಮಕ್ಕಳು ಮತ್ತು ಕಳಸ ಕುಟುಂಬ

ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್
(ಒಂದು ಷೆಡ್ಯೂಲ್ ವಾಣಿಜ್ಯ ಬ್ಯಾಂಕ್)
ನೋಂದಾಯಿತ ಕಛೇರಿ : ದಿ ಫೇರ್‌ವೇ, ನೆಲ ಮತ್ತು ಮೊದಲನೇ ಮಹಡಿ, ಸರ್ವೆ ಸಂ. 10/1, 11/2 ಮತ್ತು 12/2ಬಿ, ದೊಮ್ಮಲೂರು ಪಕ್ಕ, ಕೋರಮಂಗಲ ಒಳ ವರ್ತುಲ ರಸ್ತೆ, ಇಜಿಎಲ್ ಬ್ಯುಸಿನೆಸ್ ಪಾರ್ಕ್ ನಂತರ, ಚಲ್ಲಘಟ್ಟ, ಬೆಂಗಳೂರು-560071.

2002ರ ಸರ್ಫೇಸಿ ಕಾಯಿದೆಯ ಕಲಂ 13(2)ರಡಿ ಡಿಮಾಂಡ್ ನೋಟಿಸ್

ಆದಾಗ್ಯೂ ಕೆಳಕಂಡಂತೆ ತಿಳಿಸಲಾದ ಸಾಲಗಾರರು, ಸಹ-ಸಾಲಗಾರರು, ಜಾಮೀನುದಾರರು ಮತ್ತು ಅಡಮಾನದಾರರು ಆದ ನೀವು ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್‌ನಿಂದ, ನಿಮ್ಮಗಳ ಸ್ಥಿರ ಆಸ್ತಿಗಳನ್ನು ಅಡಮಾನ ಮಾಡಿ ಸಾಲಗಳನ್ನು ಪಡೆದಿರುತ್ತೀರಿ. ನೀವೆಲ್ಲಾ ಸಾಲ ತೀರಿಸದೇ ವಿಫಲರಾಗಿ ಸುಸ್ತಿಯಾದುದರಿಂದ ನಿಮ್ಮ ಸಾಲದ ಖಾತೆಯನ್ನು ನಿಷ್ಕಾರ್ಯ ಆಸ್ತಿ ಎಂಬುದಾಗಿ ವರ್ಗೀಕರಿಸಲಾಗಿದೆ, ಆದಾಗ್ಯೂ ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್ ಭದ್ರತಾ ಸಾಲಿಗರಾಗಿ ಕಾಯಿದೆಯಡಿ ಮತ್ತು ಸದರಿ ಕಾಯಿದೆಯ ಕಲಂ 13(2) ಮತ್ತು 2002ರ ಭದ್ರತಾ ಹಿತಾಸಕ್ತಿ ನಿಯಮಗಳ ನಿಯಮ 2ರ ಜೊತೆಗೆ ಒದಗಿಬಂದ ಅಧಿಕಾರಗಳಂತೆ, ಕೆಳಕಂಡಂತಿರುವ ವಿವರಗಳ ಪಟ್ಟಿಯ ಕಾಲಂ ಸಂ.2ರಲ್ಲಿ ತಿಳಿಸಲಾದ ಸಾಲಗಾರರು/ ಸಹ-ಸಾಲಗಾರರು/ ಜಾಮೀನುದಾರರು/ಅಡಮಾನದಾರರುಗಳಿಗೆ ಡಿಮಾಂಡ್ ನೋಟೀಸ್ ಜಾರಿಮಾಡಿ ನೋಟೀಸ್‌ನಲ್ಲಿ ನಮೂದಿಸಲಾದ ಬಾಕಿ ಸಾಲದ ಮೊಬಲಗು ಮತ್ತು ತದನಂತರದ ಬಡ್ಡಿ ಸೇರಿದ ಮೊತ್ತವನ್ನು ಡಿಮಾಂಡ್ ನೋಟೀಸ್‌ನ ದಿನಾಂಕದಿಂದ 60 ದಿನಗೊಳಗಾಗಿ ತೀರಿಸಬೇಕೆಂದು ಸೂಚಿಸಲಾಗಿತ್ತು. ಆದರೆ ಕೆಲವು ವಿವಿಧ ಕಾರಣಗಳಿಂದ ನೋಟೀಸ್‌ಗಳ ಸರ್ವ್ ಮಾಡಲಾಗಲಿಲ್ಲ.

ಕ್ರ. ಸಂ	ಸಾಲಗಾರ/ಸಹ-ಸಾಲಗಾರ/ ಜಾಮೀನುದಾರ/ ಅಡಮಾನದಾರರ ಹೆಸರು	ಸಾಲದ ಸಂಖ್ಯೆ ಮತ್ತು ಸಾಲದ ಮೊತ್ತ	ಹರಿಮಾಣಕ್ಕೆ ಒಳಗಾಗುವ ಭದ್ರತಾ ಆಸ್ತಿಯ ವಿವರಣೆ	ಎನ್‌ಪಿಎ ಮತ್ತು ಡಿಮಾಂಡ್ ನೋಟೀಸ್ ನ ದಿನಾಂಕ	ಬಾಕಿ ಮೊತ್ತ ರೂ./ಗಳಲ್ಲಿ ಕೆಳಕಂಡಂತೆ ಇದ್ದಂತೆ
1	1) ಶ್ರೀ ಎಸ್ ಪಿ ಚೇತನ್ ರಾಜ್, 2) ಶ್ರೀಮತಿ ಜ್ಯೋತಿ ಲಕ್ಷ್ಮಿ ಆರ್	Loan Account No. 45479420002603 & 45479430003954 Loan Amount: Rs.6,50,000/- & Rs.3,00,000/-	ಅಡಮಾನಿತ ಸ್ಥಿರಾಸ್ತಿ: - ಸಕಲ ಸಮಸ್ತವೂ ಸೇರಿದ ಸ್ಥಿರಾಸ್ತಿ ಖಾತಾ ಅಸೆಸ್‌ಮೆಂಟ್ ಸಂ.1095 ಆಸ್ತಿ ಸಂ.76, ಪ